**ಕರ್ನಾಟಕ ಸರ್ಕಾರ**
**ಸಹಕಾರ ಚುನಾವಣಾ ಪ್ರಾಧಿಕಾರ**

**ಸಂಖ್ಯೆ:ಸಚುಪ್ರಾ/ಚುನಾವಣೆ/ 06 /2014**

3 ನೇ ಮಹಡಿ, ಶಾಂತಿನಗರ ಟಿ.ಟಿ.ಎಂ.ಸಿ. ಎ ಬ್ಲಾಕ್,
ಶಾಂತಿನಗರ, ಬೆಂಗಳೂರು-27
**ದಿನಾಂಕ: 31.01.2015**

ಸಹಕಾರ ಸಂಘಗಳ ಉಪನಿಬಂಧಕರು ಹಾಗೂ

ಜಿಲ್ಲಾ ಚುನಾವಣಾಧಿಕಾರಿಗಳು,

________________ ಜಿಲ್ಲೆ.

ಮಾನ್ಯರೇ,

**ವಿಷಯ** :- ಚುನಾವಣೆ ಪ್ರಕ್ರಿಯೆ ಪ್ರಾರಂಭಿಸಿದ್ದರೂ ಪದಾವಧಿಯೊಳಗಾಗಿ ಸಹಕಾರ ಸಂಘಗಳ ಅಧಿನಿಯಮ 1959 ಪ್ರಕರಣ 30ಬಿ ನಿರ್ದೇಶನ ಮತ್ತು ಸರ್ಕಾರದ ಆದೇಶದಂತೆ ಚುನಾವಣೆ ಪ್ರಕ್ರಿಯೆಯನ್ನು ಮುಂದೂಡಿ ಪದಾವಧಿಯೊಳಗಾಗಿ ಚುನಾವಣೆ ನಡೆಸುವ ಬಗ್ಗೆ.

**ಉಲ್ಲೇಖ** :- 01. ಸರ್ಕಾರದ ಪತ್ರ ಸಂಖ್ಯೆ : ಸಿ.ಒ/08/ಸಿ.ಎಲ್.ಎಂ/2015 ದಿನಾಂಕ : 22.01.2015.

02. ಸರ್ಕಾರದ ಆದೇಶ ಸಂಖ್ಯೆ : ಸಿ.ಒ/23/ಸಿಎಲ್ಎಂ/2015 ದಿನಾಂಕ : 29.01.2015.

03. ಸರ್ಕಾರದ ಆದೇಶ ಸಂಖ್ಯೆ : ಸಿ.ಒ/24/ಸಿಎಲ್ಎಂ/2015 ದಿನಾಂಕ : 29.01.2015.

04. ಸಹಕಾರ ಸಂಘಗಳ ನಿಬಂಧಕರು, ಕರ್ನಾಟಕ ರಾಜ್ಯ, ಬೆಂಗಳೂರು ಇವರ ಆದೇಶ ಸಂಖ್ಯೆ : ಓಟಿಎಸ್-1/309/ಪಿಎಲ್ಎನ್/2014-15 ದಿನಾಂಕ : 29.01.2015.

05. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಹಕಾರ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು ಇವರ ಅ.ಸ.ಪ.ಸಂಖ್ಯೆ : ಸಿಒ.08.ಸಿ.ಎಲ್.ಎಂ/2015 ದಿನಾಂಕ : 30.01.2015.

06. ಸಹಕಾರ ಚುನಾವಣಾ ಪ್ರಾಧಿಕಾರ, ಬೆಂಗಳೂರು ಇದರ ಅಧಿಸೂಚನೆ ಸಂಖ್ಯೆ : ಸಚುಅ/ಚುನಾವಣೆ/84/2014 ದಿನಾಂಕ : 06.11.2014.

★★★★★

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಸರ್ಕಾರದ ಉಲ್ಲೇಖ(2)ರ ಅರೆಸರ್ಕಾರಿ ಪತ್ರದಲ್ಲಿ ಸಹಕಾರ ಸಂಘಗಳ ಅಧಿನಿಯಮ ತಿದ್ದುಪಡಿ 2014 ಪ್ರಕರಣ 28ಎ(3)(iii)ರ ಪ್ರಕಾರ ಸಹಕಾರ ಸಂಘದ ಆಡಳಿತ ಮಂಡಳಿಯಲ್ಲಿ ಹಿಂದುಳಿದ ವರ್ಗಗಳಿಗೆ ಎರಡು ಸ್ಥಾನಗಳನ್ನು ಮೀಸಲಿರಿಸಲಾಗಿದೆ. ಈ ಅವಕಾಶವನ್ನು ಪ್ರಸಕ್ತ ಸಾಲಿನಲ್ಲಿ ನಡೆಯುವ ಚುನಾವಣೆಯಲ್ಲಿ ಅನ್ವಯಿಸಿ ಮೀಸಲಾತಿ ನೀಡಲು ನಿಯಮಗಳನ್ನು ರೂಪಿಸಲು ಕಾಲಾವಕಾಶದ ಅಗತ್ಯತೆ ಇದೆ ಎಂಬುದಾಗಿ ತಿಳಿಸಲಾಗಿದೆ.

ಕರ್ನಾಟಕ ವಿಧಾನ ಮಂಡಲದ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಕಲ್ಯಾಣ ಸಮಿತಿಯು ಸಹಕಾರ ಸಂಘಗಳಲ್ಲಿ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಸದಸ್ಯರು ಹೆಚ್ಚುವರಿಯಾಗಿ ಷೇರುಹಣ ಪಾವತಿಸಿಲ್ಲವೆಂಬ ಕಾರಣ ಮತಚಲಾಯಿಸುವ ಹಕ್ಕನ್ನು ನಿರಾಕರಿಸಲಾಗುತ್ತಿದೆ ಎಂಬುದನ್ನು ಸರಿಪಡಿಸಿ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಸದಸ್ಯರಿಗೆ ಮತಚಲಾಯಿಸುವ ಹಕ್ಕನ್ನು ನೀಡಲು ಕಾಲಾವಕಾಶದ ಅವಶ್ಯಕತೆ ಇದೆ ಎಂಬುದಾಗಿ ತಿಳಿಸಲಾಗಿದೆ.

ಮಾರ್ಚ್ ಮಾಸಾಂತ್ಯಕ್ಕೆ ಅಧಿಕಾರಾವಧಿ ಅಂತ್ಯಗೊಳ್ಳುವ ಆಡಳಿತ ಮಂಡಳಿಗೆ ಮಾರ್ಚ್ ಮೊದಲನೇ ವಾರದಲ್ಲಿ ಚುನಾವಣೆ ಪ್ರಕ್ರಿಯೆಯನ್ನು ಪ್ರಾರಂಭಿಸಿದರೂ ಹಾಲಿ ಇರುವ ಆಡಳಿತ ಮಂಡಳಿ ಅವಧಿಯು 5 ವರ್ಷ ಮೀರುವ ಪೂರ್ವದಲ್ಲಿಯೇ ಚುನಾವಣಾ ಪ್ರಕ್ರಿಯೆ ಪೂರ್ಣಗೊಳ್ಳುತ್ತದೆ ಎಂದು ತಿಳಿಸಿ ಮಾರ್ಚ್-2015ರ ಮಾಸದಲ್ಲಿ ಅಂತ್ಯಗೊಳ್ಳುವಂತಹ ಸಹಕಾರ ಸಂಘಗಳ ಚುನಾವಣಾ ಪ್ರಕ್ರಿಯೆಗಳನ್ನು ಪ್ರಾರಂಭಿಸಿದ್ದರೂ ಅವುಗಳನ್ನು ಮುಂದೂಡಿ ಮಾರ್ಚ್ ಮೊದಲನೇ ವಾರದಲ್ಲಿ ಚುನಾವಣೆ ಪ್ರಕ್ರಿಯೆಗಳನ್ನು ಪ್ರಾರಂಭಿಸಿ ಚುನಾವಣೆಗಳನ್ನು ನಡೆಸಲು ಅಗತ್ಯ ಕ್ರಮ ಕೈಗೊಳ್ಳಲು ಕೋರಲಾಗಿದೆ.

........2/-

ಸರ್ಕಾರದ ಉಲ್ಲೇಖ (2) ಮತ್ತು (3)ರ ಆದೇಶದ ಮತ್ತು ನಿರ್ದೇಶನದಲ್ಲಿ ಸಹಕಾರ ಸಂಘಗಳ ಅಧಿನಿಯಮ 1959 (ತಿದ್ದುಪಡಿ 2014) ಪ್ರಕರಣ 28ಎ(3)(iii)ರಲ್ಲಿ ಅವಕಾಶ ಕಲ್ಪಿಸಿರುವಂತೆ ನಿಯಮಗಳು ಇನ್ನೂ ಜಾರಿಯಾಗದಿರುವುದರಿಂದ ಈ ವರ್ಗದ ಜನರು ಅವಕಾಶವಿರುವ ಮೀಸಲಾತಿಯಿಂದ ವಂಚಿತರಾಗುವುದನ್ನು ತಪ್ಪಿಸಲು ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 30(ಬಿ)ರಡಿ ನಿರ್ದೇಶನ ನೀಡಲಾಗಿದೆ.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಕ್ಕೆ ಸೇರಿದವರನ್ನು ಸದಸ್ಯರನ್ನಾಗಿ ಮಾಡುವ ಮತ್ತು ಸದಸ್ಯತ್ವ ಶುಲ್ಕವನ್ನು ಪಾವತಿಸುವ ಬಗ್ಗೆ ಸಹಕಾರ ಸಂಘಗಳ ಅಧಿನಿಯಮ 1959 ಪ್ರಕರಣ 30(ಬಿ)ಪ್ರಕಾರ ಆದೇಶ ಹೊರಡಿಸಿ ಸಹಕಾರ ಸಂಘಗಳಿಗೆ ಚುನಾವಣೆ ಪ್ರಕ್ರಿಯೆ ಪ್ರಾರಂಭವಾಗಿ ಮತದಾರರ ಪಟ್ಟಿ ಅಂತಿಮವಾಗದೆ ಇರುವ ಸಹಕಾರ ಸಂಘಗಳಲ್ಲಿ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಸದಸ್ಯರುಗಳಿಂದ ವ್ಯತ್ಯಾಸದ ಷೇರು ಹಣವು ಬಾಕಿ ಇದ್ದಲ್ಲಿ ಈ ಹಣವು ಸ್ವೀಕೃತವಾಗಿದೆ ಎಂದು ಪರಿಗಣಿಸಿ ಅಂತಹವರ ಹೆಸರನ್ನು ಮತದಾರರ ಪಟ್ಟಿಯಲ್ಲಿ ಸೇರಿಸಿಕೊಳ್ಳಲು ನಿರ್ದೇಶನ ನೀಡಲಾಗಿದೆ.

ಈ ಮೇಲಿನ ಕಂಡಿಕೆಗಳಲ್ಲಿ ಸರ್ಕಾರದ ಪತ್ರ, ಅರೆಸರ್ಕಾರಿ ಪತ್ರ ಮತ್ತು ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 30(ಬಿ)ರಡಿಯಲ್ಲಿ ನೀಡಲಾದ ನಿರ್ದೇಶನಗಳನ್ನು ಪರಿಶೀಲಿಸಿದ ನಂತರ " **ಅಧಿಕಾರಾವಧಿ ಅಂತ್ಯಗೊಳ್ಳುವ ಮತ್ತು 5 ವರ್ಷ ಮೀರುವ ಪೂರ್ವದಲ್ಲಿ ಚುನಾವಣೆ ಪ್ರಕ್ರಿಯೆ ಪೂರ್ಣಗೊಳ್ಳಲಿರುವ ಆಡಳಿತ ಮಂಡಲಿಗಳಿಗೆ ಚುನಾವಣೆಗಳನ್ನು ನಡೆಸಲು ಸಹಕಾರ ಚುನಾವಣಾ ಪ್ರಾಧಿಕಾರದಿಂದ ದಿನಾಂಕ : 06.11.2014ರಲ್ಲಿ ಹೊರಡಿಸಿರುವ ಅಧಿಸೂಚನೆಯಲ್ಲಿ ದಿನಾಂಕ 20/21.12.2014 ರಿಂದ 24/25.01.2015ರವರೆಗಿನ ಅವಧಿಯ ಆಡಳಿತ ಮಂಡಲಿಗಳ ಚುನಾವಣೆಗಳು ಪೂರ್ಣಗೊಂಡಿರುತ್ತವೆ. ದಿನಾಂಕ : 01/02.02.2015 ರಿಂದ 07/08.02.2015ಅವಧಿಯ ಆಡಳಿತ ಮಂಡಲಿಗಳ ಚುನಾವಣಾ ವೇಳಾಪಟ್ಟಿ ಪ್ರಕಟವಾಗಿದ್ದು ಚುನಾವಣಾ ಪ್ರಕ್ರಿಯೆ ಪ್ರಗತಿಯಲ್ಲಿರುತ್ತವೆ. ದಿನಾಂಕ : 14/15.02.2015ರ ಅವಧಿಯ ಆಡಳಿತ ಮಂಡಲಿಗಳ ಚುನಾವಣಾ ವೇಳಾ ಪಟ್ಟಿ ಸಹಾ ದಿನಾಂಕ : 30.01.2015ಕ್ಕೆ ಪ್ರಕಟಿಸಲಾಗಿರುತ್ತದೆ. ಈ ಅವಧಿಯ ಸಂಘಗಳ ಚುನಾವಣೆಗಳನ್ನು ಮುಂದೂಡಲು ಕಾನೂನಿನಲ್ಲಿ ಅವಕಾಶವಿರುವುದಿಲ್ಲ.**

**ಚುನಾವಣೆ ನಡೆಸಲು ರಿಟರ್ನಿಂಗ್ ಆಫೀಸರ್ ನೇಮಕವಾಗಿ ಚುನಾವಣಾ ಪ್ರಕ್ರಿಯೆ ಪ್ರಾರಂಭವಾಗಿದ್ದು ಚುನಾವಣಾ ವೇಳಾಪಟ್ಟಿ ಪ್ರಕಟವಾಗದಿರುವ ಸಂಘಗಳ ವಿವರಗಳು ಕೆಳಗಿನಂತಿರುತ್ತವೆ.**

| ಕ್ರಮ ಸಂಖ್ಯೆ | ವಿವಿಧ ರೀತಿಯ ಸಹಕಾರ ಸಂಘಗಳ ವಿವರಗಳು. | ಚುನಾವಣೆ ನಡೆಸಲು ನಿಗಧಿ ಪಡಿಸಿರುವ ದಿನಾಂಕಗಳು. | ಚುನಾವಣಾ ಪ್ರಕ್ರಿಯೆ ಕುರಿತ ವಿವರಗಳು. |
|---|---|---|---|
| 04 | ಸೌಹಾರ್ದ ಹಾಗೂ ಇತರೆ ಪತ್ತಿನ ಸಹಕಾರ ಸಂಘಗಳು, ಗೃಹ ನಿರ್ಮಾಣ ಸಹಕಾರ ಸಂಘಗಳು, ಎಲ್ಲಾ ಪತ್ತೇತರ ಸಹಕಾರ ಸಂಘಗಳು, ನೀರು ಬಳಕೆದಾರರ ಸಹಕಾರ ಸಂಘಗಳು ಮತ್ತು ಇತರೆ ಎಲ್ಲಾ ಸಹಕಾರ ಸಂಘಗಳು. | 21-02-2015 ಮತ್ತು 22-02-2015 | ಸದರಿ ಅವಧಿಯ ಸಹಕಾರ ಸಂಘಗಳ ಚುನಾವಣಾ ವೇಳಾಪಟ್ಟಿ ಪ್ರಕಟಿಸಬೇಕಾಗಿರುತ್ತದೆ. ಈ ಅವಧಿಯ ಸಹಕಾರ ಸಂಘಗಳ ಚುನಾವಣೆಯನ್ನು ಪದಾವಧಿಗೆ ಅನುಗುಣವಾಗಿ ಚುನಾವಣಾ ಪ್ರಕ್ರಿಯೆಯನ್ನು ಮುಂದೂಡಿ ಪದಾವಧಿಪೂರ್ಣಗೊಳ್ಳುವುದರೊಳಗಾಗಿ ಚುನಾವಣಾ ಪ್ರಕ್ರಿಯೆಯನ್ನು ಪ್ರಾರಂಭಿಸಿ ಚುನಾವಣೆಯನ್ನು ನಿಯಮಾನುಸಾರ ಮತ್ತು ಪಾರದರ್ಶಕವಾಗಿ ಪದಾವಧಿ ಮುಗಿಯುವುದರೊಳಗಾಗಿ ಚುನಾವಣೆ ಗಳನ್ನು ಪೂರ್ಣ ಗೊಳಿಸಲು ಎಲ್ಲಾ ಅಗತ್ಯ ಕ್ರಮಗಳನ್ನು ಕೈಗೊಳ್ಳತಕ್ಕದ್ದು. |

...............3/-

| | | | |
|---|---|---|---|
| 05 | ಚುನಾವಣೆ ನಡೆಸಲು ಬಾಕಿ ಉಳಿದ ಇತರೆ ಯಾವುದೇ ಸಹಕಾರ ಸಂಘಗಳು / ಸಹಕಾರಿಗಳು. | 27-02-2015, 28-02-2015 ಮತ್ತು 01-03-2015 | ನಿಗಧಿತ ದಿನಾಂಕಗಳಂದು ಚುನಾವಣೆ ಗಳನ್ನು ನಡೆಸಲು ಸಾಧ್ಯವಾಗದೆ ಇರುವ ಮತ್ತು ಕಾಲಾವಕಾಶ ಕೋರಿ ಅನುಮತಿ ಪಡೆದ ಸಹಕಾರ ಸಂಘಗಳು ಸರ್ಕಾರದ ಆದೇಶ ಮತ್ತು ನಿರ್ದೇಶನದಂತೆ ಅಗತ್ಯ ಕ್ರಮ ಕೈಗೊಂಡು ಚುನಾವಣೆಗಳನ್ನು ಪೂರ್ಣಗೊಳಿಸುವ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳತಕ್ಕದ್ದು. |

**ಮೇಲೆ ವಿವರಿಸಿದಂತೆ ಪ್ರಾಧಿಕಾರದ ಅಧಿಸೂಚನೆಯ ಪ್ರಕಾರ ದಿನಾಂಕ : 21/22.02.2015 ಮತ್ತು 27/28.02.2015 ಹಾಗೂ 01.03.2015ರ ಅವಧಿಯಲ್ಲಿ ನಡೆಯಲಿರುವ ಸಹಕಾರ ಸಂಘಗಳ / ಸಹಕಾರಿಗಳ ಚುನಾವಣೆಯನ್ನು ಸರ್ಕಾರದ ಆದೇಶ ಮತ್ತು ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 30(ಬಿ) ನಿರ್ದೇಶನಗಳಂತೆ ಸಹಕಾರ ಸಂಘಗಳ / ಸಹಕಾರಿಗಳ ಚುನಾವಣಾ ಪ್ರಕ್ರಿಯೆಯನ್ನು ಮುಂದೂಡಿ ಪದಾವಧಿ ಪೂರ್ಣಗೊಳ್ಳುವುದರೊಳಗಾಗಿ ಚುನಾವಣಾ ಪ್ರಕ್ರಿಯೆಯನ್ನು ನಿಯಮಾನುಸಾರ ಪ್ರಾರಂಭಿಸಿ ಪೂರ್ಣಗೊಳಿಸಲು ಅಗತ್ಯ ಕ್ರಮ ಕೈಗೊಳ್ಳತಕ್ಕದ್ದು.**

**ತಮ್ಮ ವಿಶ್ವಾಸಿ,**

**(ಬಿ.ಹೆಚ್.ಮರಿಜಪ್ಪ)**
**ಕಾರ್ಯದರ್ಶಿ**

**ಇವರಿಗೆ:-**

1. ರಾಜ್ಯದ ಎಲ್ಲಾ ಪ್ರಾಂತೀಯ ಸಹಕಾರ ಸಂಘಗಳ ಜಂಟಿ ನಿಬಂಧಕರುಗಳಿಗೆ ಸೂಕ್ತ ಕ್ರಮಕ್ಕಾಗಿ.
2. ರಾಜ್ಯದ ಎಲ್ಲಾ ಉಪವಿಭಾಗಗಳ ಸಹಕಾರ ಸಂಘಗಳ ಸಹಾಯಕ ನಿಬಂಧಕರುಗಳಿಗೆ ಸೂಕ್ತ ಕ್ರಮಕ್ಕಾಗಿ.
3. ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳ ವ್ಯವಸ್ಥಾಪಕ ನಿರ್ದೇಶಕರುಗಳಿಗೆ ಸೂಕ್ತ ಕ್ರಮಕ್ಕಾಗಿ.
4. ರಾಜ್ಯದ ಎಲ್ಲಾ ಜಿಲ್ಲಾ ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟಗಳ ವ್ಯವಸ್ಥಾಪಕ ನಿರ್ದೇಶಕರುಗಳಿಗೆ ಸೂಕ್ತ ಕ್ರಮಕ್ಕಾಗಿ.

**ಪ್ರತಿಗಳು:-**

1. ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಹಕಾರ ಇಲಾಖೆ, ಬಹುಮಹಡಿಗಳ ಕಟ್ಟಡ, 6ನೇ ಮಹಡಿ, ಬೆಂಗಳೂರು-01.
2. ಸಹಕಾರ ಸಂಘಗಳ ನಿಬಂಧಕರು, ಕರ್ನಾಟಕ ರಾಜ್ಯ, ನಂ.1, ಅಲಿ ಆಸ್ಕರ್ ರಸ್ತೆ, ಬೆಂಗಳೂರು-52.
3. ಸಹಕಾರ ಸಂಘಗಳ ನಿಬಂಧಕರ ಕಛೇರಿಯ ಎಲ್ಲಾ ಅಪರ ನಿಬಂಧಕರು / ಜಂಟಿ ನಿಬಂಧಕರುಗಳಿಗೆ.
4. ರಾಜ್ಯದ ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ.
5. ರಾಜ್ಯದ ಎಲ್ಲಾ ಜಿಲ್ಲೆಗಳ ಆರಕ್ಷಕ ಅಧೀಕ್ಷಕರಿಗೆ.
6. ಸಹಕಾರ ಚುನಾವಣಾ ಪ್ರಾಧಿಕಾರದ ಜಂಟಿ ನಿಬಂಧಕರು / ಉಪನಿಬಂಧಕರು, ಸಹಾಯಕ ನಿಬಂಧಕರು, ಬೆಂಗಳೂರು ಪ್ರಾಂತ / ಬೆಳಗಾವಿ ಪ್ರಾಂತ / ಕಲಬುರಗಿ ಪ್ರಾಂತ / ಮೈಸೂರು ಪ್ರಾಂತ.